# ಭಾಷಾ ಕಲಿಕೆಯಲ್ಲಿ ಡಿಜಿಟಲ್ ತಂತ್ರಜ್ಞಾನದ ಪಾತ್ರ

*– ಆನಂದ ಡಿ.*

## ಲೇಖನದ ಸಾರಾಂಶ

*ಪ್ರಸ್ತುತ ಲೇಖನವು ಶಾಲಾ ತರಗತಿಗಳಲ್ಲಿ, ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯಗಳಾದ ಆಲಿಸುವಿಕೆ, ಮಾತನಾಡುವಿಕೆ, ಬರೆಯುವ ಮತ್ತು ಓದುವ ಕೌಶಲ್ಯಗಳನ್ನು ಹೆಚ್ಚಿಸುವಲ್ಲಿ ಡಿಜಿಟಲ್ ತಂತ್ರಜ್ಞಾನಗಳ ಬಳಕೆಯು ಉಂಟುಮಾಡುವ ಪರಿಣಾಮಗಳ ಬಗೆಗೆ ಗಮನಹರಿಸುತ್ತದೆ. ಅದರಲ್ಲಿಯೂ ನಿರ್ದಿಷ್ಟವಾಗಿ ಭಾಷಾ ಬೋಧನೆಯಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರ ಪರಿಣಾಮವನ್ನು ಈ ಲೇಖನವು ವಿವರಿಸುತ್ತದೆ. ತಂತ್ರಜ್ಞಾನವನ್ನು ಸಮರ್ಪಕವಾಗಿ ವಿನ್ಯಾಸಗೊಳಿಸಿದರೆ, ಅದು ಕೇವಲ ವಿದ್ಯಾರ್ಥಿಗಳ ಕಲಿಕೆಯನ್ನು ಸಾಧ್ಯಗೊಳಿಸುತ್ತದೆ. ಅಲ್ಲದೆ, ಅವರಲ್ಲಿ ಕ್ರಿಯಾಶೀಲತೆ, ಹೊಂದಾಣಿಕೆ, ನಾಯಕತ್ವದ ಗುಣಗಳನ್ನು ಪೋಷಿಸಿ, ಆತ್ಮವಿಶ್ವಾಸ ಮತ್ತು ಅಭಿಪ್ರೇರಣೆಯನ್ನು ಹೆಚ್ಚಿಸುತ್ತದೆ ಎನ್ನುವ ತೀರ್ಮಾನಕ್ಕೆ ಈ ಲೇಖನವು ಅಂತಿಮವಾಗಿ ಬರುತ್ತದೆ. ಈ ಲೇಖನವು 'ಐಟಿ ಫಾರ್ ಚೇಂಜ್' ಸಂಸ್ಥೆಯು 2015 ರಿಂದ 2017ರವರೆಗೆ ಬೆಂಗಳೂರು ದಕ್ಷಿಣದ ಹದಿನಾರು ಶಾಲೆಗಳಲ್ಲಿ ನಡೆಸಿದ ವಿಸ್ತೃತವಾದ ಅಧ್ಯಯನದ ಒಂದು ಭಾಗವಾಗಿದೆ. ಈ ಲೇಖನವು ನಾಲ್ಕು ಶಾಲೆಗಳಲ್ಲಿ ನಡೆಸಿದ ಅಧ್ಯಯನದ ಫಲಿತಗಳನ್ನು ಮಾತ್ರ ಚರ್ಚಿಸುತ್ತದೆ.*

## ಪೀಠಿಕೆ

ಡಿಜಿಟಲ್ ತಂತ್ರಜ್ಞಾನಗಳ ಅರ್ಥಪೂರ್ಣವಾದ ಬಳಕೆಯು ಮಕ್ಕಳಲ್ಲಿ ಭಾಷೆಯ ಮೂಲ ಕೌಶಲ್ಯಗಳನ್ನು ಬೆಳಸುವಲ್ಲಿ ಮತ್ತು ಕಲಿಕೆಯಲ್ಲಿ ಭಾಗವಹಿಸಲು ಎಲ್ಲರಿಗೂ ಸಮಾನವಾದ ಅವಕಾಶವನ್ನು ಒದಗಿಸುವಲ್ಲಿ ನೆರವಾಗುತ್ತದೆ. ಇದು ವಿದ್ಯಾರ್ಥಿಗಳು ಮುಕ್ತವಾಗಿ ಆಲೋಚಿಸಲು, ಮಾತನಾಡಲು ಹಾಗೂ ತರಗತಿಯ ಪರಿಸರವನ್ನು ವಿದ್ಯಾರ್ಥಿ ಕೇಂದ್ರಿತವಾಗಿ ಮಾರ್ಪಡಿಸಲು ಅನುವು ಮಾಡಿಕೊಡುತ್ತದೆ.

ಈ ಲೇಖನವು 'ಐಟಿ ಫಾರ್ ಚೇಂಜ್' ಸಂಸ್ಥೆ ಮತ್ತು ಕೆಲವು ಭಾಷಾ ಶಿಕ್ಷಕರು ಜಂಟಿಯಾಗಿ 2015ರಿಂದ 2017ರ ಅವಧಿಯಲ್ಲಿ ಬೆಂಗಳೂರು ದಕ್ಷಿಣದ ಹದಿನಾರು ಸರ್ಕಾರಿ ಪ್ರೌಢ ಶಾಲೆಗಳಲ್ಲಿ ನಡೆಸಿದ ಅಧ್ಯಯನದ ಭಾಗವಾಗಿದೆ. ಇವುಗಳಲ್ಲಿ ಕ್ರಮವಾಗಿ ದೊಮ್ಮಲೂರು, ಈಜಿಪುರ, ಜಯನಗರ ಮತ್ತು ಟ್ಯಾಂಕ್ ಗಾರ್ಡನ್‌ನಲ್ಲಿರುವಂತಹ ಒಟ್ಟು ನಾಲ್ಕು ಶಾಲೆಗಳನ್ನು ಈ ಲೇಖನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನವು 8ನೇ ತರಗತಿಯಲ್ಲಿ ಓದುತ್ತಿರುವ ಉರ್ದು

ಮಾಧ್ಯಮದ ವಿದ್ಯಾರ್ಥಿಗಳ ಕುರಿತದ್ದಾಗಿದ್ದಿತು. ಈ ಶಾಲೆಗಳು ಉರ್ದು ಮಾಧ್ಯಮದ್ದಾಗಿದ್ದು ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಸುತ್ತವೆ. ಈ ಅಧ್ಯಯನವು ಡಿಜಿಟಲ್ ತಂತ್ರಜ್ಞಾನವನ್ನು ಬಳಸಿ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆಯ ಸಾಮರ್ಥ್ಯವನ್ನು ಹೇಗೆ ಹೆಚ್ಚಿಸಲಾಯಿತು ಮತ್ತು ತಂತ್ರಜ್ಞಾನದ ಬಳಕೆಯಿಂದ ಭಾಷೆಯ ಕಲಿಕೆ ಮತ್ತು ಬೋಧನೆಯನ್ನು ಹೇಗೆ ಬದಲಾಯಿಸಬಹುದು ಎನ್ನುವುದನ್ನು ಚಿತ್ರಿಸುತ್ತದೆ.

ಅಧ್ಯಯನದ ಪೂರ್ವದಲ್ಲಿ, ವಿದ್ಯಾರ್ಥಿಗಳ ಮೂಲಾಧಾರ ಕಲಿಕಾ ಮಟ್ಟ (baseline learning levels) ಕಂಡುಕೊಳ್ಳಲಾಯಿತು. ಇದಕ್ಕೆ ಕನ್ನಡ ವರ್ಣಮಾಲೆಯ ಸ್ವರ, ವ್ಯಂಜನ, ಕಾಗುಣಿತಾಕ್ಷರ, ಒತ್ತಕ್ಷರಗಳನ್ನು ಒಳಗೊಂಡ ಪದಗಳ ಪಟ್ಟಿಯನ್ನು ತಯಾರಿಸಿಕೊಳ್ಳಲಾಯಿತು. ಸರಳವಾದ ಕಥೆಗಳು ಮತ್ತು ಪ್ರಶ್ನೆಗಳನ್ನು ಬಳಸಲಾಯಿತು. ಈ ಮೂಲಾಧಾರ ಕಲಿಕಾ ಮಟ್ಟದಲ್ಲಿ ಆಲಿಸುವುದು, ಮಾತನಾಡುವುದು ಓದುವುದು ಮತ್ತು ಬರವಣಿಗೆಯ ಸಾಮರ್ಥ್ಯಗಳನ್ನು ಒಳಗೊಂಡಿತ್ತು. ಈ ಮೂಲಾಧಾರ ಕಲಿಕಾ ಮಟ್ಟದ ಫಲಿತಗಳನ್ನು ಇಲ್ಲಿ ಮಂಡಿಸಿರುವುದಿಲ್ಲ. ಈ ಲೇಖನವು ಎರಡು ಭಾಗಗಳನ್ನು ಒಳಗೊಂಡಿದ್ದು, ಮೊದಲನೆಯದರಲ್ಲಿ ಮಾಹಿತಿ ಮತ್ತು ಸಂವಹನದ ತಂತ್ರಜ್ಞಾನದ (ICT) ಎರಡು ಕಾರ್ಯಕ್ರಮಗಳ ಅಡಿಯಲ್ಲಿರುವ ಡಿಜಿಟಲ್ ಸಂಪನ್ಮೂಲಗಳ ಬಳಕೆಯನ್ನು ಚರ್ಚಿಸಲಾಗುವುದು. ಎರಡನೆಯ ಭಾಗವು ಮಾಹಿತಿ ತಂತ್ರಜ್ಞಾನ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳ ಮೇಲೆ ಉಂಟುಮಾಡಿದ ಪ್ರಭಾವಗಳ ಬಗೆಗೆ ಶಿಕ್ಷಕರ ಅಭಿಪ್ರಾಯಗಳೇನು? ಎನ್ನುವುದರ ಕುರಿತಾಗಿ ಚರ್ಚಿಸುತ್ತದೆ. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರ ನಾಲ್ಕು ತತ್ವಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗಿತ್ತು. ಅವೆಂದರೆ, 1. ಜ್ಞಾನವನ್ನು ಶಾಲೆಯಿಂದಾಚೆಗಿನ ಪರಿಸರದೊಂದಿಗೆ ಸಂಬಂಧಿಸುವುದು, 2. ಪಠ್ಯದಿಂದಾಚೆಗೆ ಹೋಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು, 3. ಬಾಯಿ ಪಾಠದ ಕಡೆಗಲ್ಲದೆ, ಅರ್ಥ–ಗ್ರಹಣ ಮಾಡುವುದರ ಕಡೆಗೆ ಗಮನ ಹರಿಸುವುದು, 4. ತರಗತಿಗಳ ಕಲಿಕೆಗೆ ಮತ್ತು ನಿರ್ದಿಷ್ಟ ವಿದ್ಯಾರ್ಥಿಗಳ ಅಗತ್ಯಗಳ ಪೂರೈಕೆಗೆ ತಕ್ಕುದಾಗಿ ಮೌಲ್ಯಮಾಪನದ ಆಚರಣೆಗಳನ್ನು ಅಳವಡಿಸಿಕೊಳ್ಳುವುದು.

ಭಾಷೆಯ ಕಲಿಕೆಗೆ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಬೋಧನಾ ವಿಧಾನದ ಒಂದು ಪ್ರಕ್ರಿಯೆಯಾಗಿದೆ. ನಗರದಲ್ಲಿನ ಬಹುತೇಕ ಶಾಲೆಗಳಲ್ಲಿ ಕಂಪ್ಯೂಟರ್ ಮತ್ತು ಇಂಟರ್‌ನೆಟ್‌ಗಳ ಸೌಕರ್ಯಗಳಿರುವುದರಿಂದ ಇಲ್ಲಿ ಈ ವಿಧಾನವನ್ನು ಸುಲಭವಾಗಿ ಅಳವಡಿಸಿಕೊಳ್ಳುವ ಅವಕಾಶವಿದೆ. ಬಹು ಭಾಷಿಕ ವಾತಾವರಣವಿರುವ ಈ ಶಾಲೆಗಳಿಗಂತೂ ಹೆಚ್ಚುವರಿ ಉಪಯುಕ್ತತೆಯನ್ನು ಇದು ಒದಗಿಸಿಕೊಡುತ್ತದೆ. ಈ ಬೋಧನಾ ವಿಧಾನವನ್ನು ಬೆಂಬಲಿಸಲು, ನಿರ್ದಿಷ್ಟವಾದ ತರಗತಿ ಮತ್ತು ಕಲಿಕಾ ಮಟ್ಟಗಳನ್ನಾಧರಿಸಿ ರಾಜ್ಯದ ಪಠ್ಯಕ್ರಮದಲ್ಲಿ ಸ್ವಲ್ಪಮಟ್ಟಿನ ಹೊಂದಾಣಿಕೆ ಮಾಡಿಕೊಳ್ಳಲು ಪಠ್ಯಕ್ರಮವನ್ನು ವಿಶ್ಲೇಷಿಸಲಾಯಿತು. ಈ ಪ್ರಕ್ರಿಯೆಯನ್ನು ವಿಷಯ

ತಜ್ಞರು, ಅಧ್ಯಯನಕ್ಕೆ ಒಳಪಟ್ಟ ಮತ್ತು ಒಳಪಡದ ಶಾಲೆಗಳ ಶಿಕ್ಷಕರು ಮತ್ತು ಅಧ್ಯಯನ ನಿರತ ಗುಂಪಿನ ಸದಸ್ಯರುಗಳ ಸಹಯೋಗದಲ್ಲಿ ಕೈಗೊಳ್ಳಲಾಯಿತು. ಇಲ್ಲಿನ ಚರ್ಚೆಗಳು, ಭಾಷಾ ಬೋಧನೆಯನ್ನು ಡಿಜಿಟಲ್ ರೂಪಗಳಾದ – ಆಡಿಯೋ, ಚಿತ್ರಗಳ ಆಕೃತಿಗಳು, ವಿಡಿಯೋ ಮತ್ತು ಪಠ್ಯಗಳಂತಹ– ಹಲವು ಬಗೆಗಳಲ್ಲಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ನಾಲ್ಕು ಭಾಷಿಕ ಕೌಶಲ್ಯಗಳ ಸಬಲೀಕರಣದ ಕಡೆಗೆ ಕೇಂದ್ರೀಕರಿಸಿ ಭಾಷಾ ಬೋಧನೆಯಲ್ಲಿ ತೊಡಗಬೇಕೆಂಬ ಕುರಿತಾಗಿಯೂ ಇದ್ದಿತು. ಆಲಿಸುವ ಮತ್ತು ಮಾತನಾಡುವ ಕೌಶಲ್ಯಗಳನ್ನು ಹೆಚ್ಚಿಸುವಲ್ಲಿ ಆಡಿಯೊ ಸಂಪನ್ಮೂಲಗಳ ಪಾತ್ರ ಮಹತ್ವಪೂರ್ಣವಾದುದು ಎಂದು ಒತ್ತಿ ಹೇಳಲಾಯಿತು. ಈ ಅಧ್ಯಯನವು ಎರಡು ಕಾರ್ಯಕ್ರಮಗಳ ಮೂಲಕ ಡಿಜಿಟಲ್ ಸಾಧನಗಳಾದ ಮೊಬೈಲ್, ಕಂಪ್ಯೂಟರ್, ಧ್ವನಿವರ್ಧಕಗಳು ಮತ್ತು ಕೆಲ (ಸ್ವ–ನಿರ್ಮಿತ ಮತ್ತು ಇಂಟರ್‌ನೆಟ್) ಭಾಷಾ ಅಪ್ಲಿಕೇಶನ್‌ಗಳನ್ನು ಬಳಸುವಂತಹ ಶೈಕ್ಷಣಿಕ ಪ್ರಕ್ರಿಯೆ ಮತ್ತು ಬೋಧನಾ ವಿಧಾನಗಳನ್ನು ತೋರಿಸಿಕೊಡಲಾಗುತ್ತದೆ.

## ಭಾಗ – 1

### (ಅ) ನುಡಿ ಸಂಪದ

ದೊಮ್ಮಲೂರು ಶಾಲೆಯಲ್ಲಿ **'ನುಡಿ ಸಂಪದ'**ವೂ 'ICT'ಯ ಅಡಿಯಲ್ಲಿ ನಡೆದ ಒಂದು ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮದ ಉದ್ದೇಶವು ಡಿಜಿಟಲ್ ರಸಪ್ರಶ್ನೆ, ಕವಿತಾ ವಾಚನಗಳ ಮೂಲಕ ಪದಸಂಪತ್ತು ಮತ್ತು ಸೃಜನಶೀಲ ಅಭಿವ್ಯಕ್ತಿಯನ್ನು ಹೆಚ್ಚಿಸುವುದು. ಇವನ್ನು ಶಾಲೆಯ ವೆಬ್‌ಸೈಟ್ ಬಳಸಿ ಅಲ್ಲಿ ಇದನ್ನು ಪ್ರಕಟಿಸಲಾಯಿತು. ಮಕ್ಕಳು ಈ ಸಂಪನ್ಮೂಲಗಳನ್ನು ಸೃಷ್ಟಿಸುವ ಮತ್ತು ಪ್ರಕಟಿಸುವ ಜವಾಬ್ದಾರಿಯನ್ನು ತೆಗೆದುಕೊಂಡರು. ಈ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲವಾದ ಸ್ವ–ಅಭಿವ್ಯಕ್ತಿ, ಪರಸ್ಪರ ಸಂವಾದ, ವಿಚಾರ ವಿನಿಮಯ ಮತ್ತು ಸಾಮಾಜಿಕ ಹೊಂದಾಣಿಕೆಗೆ ಅವಕಾಶ ಮಾಡಿಕೊಟ್ಟಿತು. ಇತರ ತರಗತಿಗಳ ಮಕ್ಕಳು ಈ ಅನುಸಂಧಾನಕ್ಕೆ ಪ್ರೇಕ್ಷಕರಾದರು. ಡಿಜಿಟಲ್ ಸಂಪನ್ಮೂಲಗಳನ್ನು ಬಳಸುವಲ್ಲಿ ಅವರ ಆಸಕ್ತಿಯನ್ನು ಕೂಡ ಇದು ಉದ್ದೀಪಿಸಿತು.

ಮಕ್ಕಳಿಗೆ ಶಿಕ್ಷಕರ ಸಹಾಯದಿಂದ ವಿಡಿಯೋಗಳನ್ನು, ಕವಿತೆಗಳನ್ನು ಮತ್ತು ಇತರ ಡಿಜಿಟಲ್ ಸಂಪನ್ಮೂಲಗಳನ್ನು ಸೃಷ್ಟಿಸುವ ಮತ್ತು ಪ್ರಕಟಿಸುವ ಅವಕಾಶ ಒದಗಿಸಿತ್ತು. ತಂತ್ರಜ್ಞಾನದ ಬಳಕೆಯು ಬೋಧನಾ ವಿಧಾನಕ್ಕೆ ಹೊಸ ಆಯಾಮವನ್ನು ಸೇರಿಸಿ ಮಕ್ಕಳು ಕಲಿಕೆಯಲ್ಲಿ ತೊಡಗಿಕೊಳ್ಳಲು ಆಸಕ್ತಿ ಮೂಡಿಸಿತು.

### (ಆ) 'ಭಿತ್ತಿ' ಶಾಲಾ ಪತ್ರಿಕೆ

**'ICT'**ಯ ಅಡಿಯಲ್ಲಿ ದೊಮ್ಮಲೂರಿನ ಶಾಲೆಯಲ್ಲಿ ನಡೆದ ಎರಡನೆಯ ಕಾರ್ಯಕ್ರಮವೆಂದರೆ, **'ಭಿತ್ತಿ'** ಎನ್ನುವ ಶಾಲೆಯ ಪತ್ರಿಕೆಯನ್ನು ಹೆಸರಿನಲ್ಲಿ ರೂಪಿಸಿದ್ದು. ವಿಷಯ ಸಂಗ್ರಹಣೆಗೆ ಡಿಜಿಟಲ್ ಮಾಧ್ಯಮವನ್ನು ಬಳಸಿಕೊಂಡು

ಪತ್ರಿಕೆಯನ್ನು ಶಾಲೆಯ ವೆಬ್‌ಸೈಟ್‌ನ ಮೂಲಕವೇ ಬಿತ್ತರಗೊಳಿಸಲಾಯಿತು. ಇಲ್ಲಿಯೂ, ವಿದ್ಯಾರ್ಥಿಗಳೇ ಇದರ ನಿರ್ವಹಣೆಯ ಮುಂದಾಳತ್ವವನ್ನು ವಹಿಸಿಕೊಂಡರು. ಅವರೇ ಪತ್ರಿಕೆಯ ವಿಷಯವನ್ನು ನಿರ್ಧರಿಸುತ್ತಿದ್ದರು ಹಾಗೂ ಅದರ ಸೃಷ್ಟಿ ಮತ್ತು ಹಂಚಿಕೆಯ ಹೊಣೆಯನ್ನು ಅವರೇ ಹೊತ್ತರು. ಸಂಪಾದಕ ಮಂಡಲಿಯಲ್ಲಿ ಎಲ್ಲಾ ಮಕ್ಕಳಿಗೂ ಸಮಾನ ಅವಕಾಶ ಸಿಗುವಂತೆ ಅವರನ್ನು ಸರದಿಯ ಪ್ರಕಾರ ಆಯ್ಕೆ ಮಾಡಲಾಗುತ್ತಿತ್ತು. ಈ ಪತ್ರಿಕೆಯಲ್ಲಿನ ವಿಷಯಗಳು ಮಕ್ಕಳಿಗೆ ಅನುಕೂಲವಾದ ಯಾವುದೇ ಭಾಷೆಯಲ್ಲಿ ಕೈ ಬರಹದ್ದಾಗಿರುತ್ತಿತ್ತಲ್ಲದೇ, ಸೂಕ್ತವಾದ ಫೋಟೋಗಳು ಇರುತ್ತಿದ್ದವು. ಹಲವು ಭಾಷೆಗಳಲ್ಲಿ ಬರೆಯುವುದಕ್ಕೆ, ಉತ್ತೇಜಿಸಿದ್ದರಿಂದ ಹಲವು ಭಾಷೆಗಳ ಕಲಿಕೆಗೆ ಮತ್ತು ಪಠ್ಯಪುಸ್ತಕದಿಂದಾಚೆಗೆ ಕಲಿಯಲು ಅವಕಾಶ ಮಾಡಿಕೊಟ್ಟಿತು. ಈ ಪತ್ರಿಕೆಗಳನ್ನು 'ವಾಟ್ಸ್ ಆಪ್' ಮತ್ತು 'ಟೆಲಿಗ್ರಾಂ'ಗಳಂತಹ ಮಾಧ್ಯಮಗಳ ಮೂಲಕ ಇತರ ಶಾಲೆಗಳೊಂದಿಗೂ ಹಂಚಿಕೊಳ್ಳಲಾಯಿತು.

ಈ ಎರಡು ಕಾರ್ಯಕ್ರಮಗಳು ಡಿಜಿಟಲ್ ಸಂಪನ್ಮೂಲಗಳಾದ ಆಡಿಯೋ, ವಿಡಿಯೋ ತುಣುಕುಗಳು, ಚಿತ್ರದ ಆಕೃತಿ ಮತ್ತು ಪಠ್ಯಗಳ ಬಳಕೆ ಹಲವು ಭಾಷೆಯ ಮೂಲ ಸಾಮರ್ಥ್ಯಗಳನ್ನು ಗಳಿಸುವಲ್ಲಿ ಸಾಧ್ಯತೆಗಳನ್ನು ಒದಗಿಸಿಕೊಟ್ಟಿದ್ದನ್ನು ತೋರಿಸಿಕೊಟ್ಟಿತ್ತು. ಈ ಡಿಜಿಟಲ್ ಸಂಪನ್ಮೂಲಗಳ ಬಳಕೆಯು ವಿದ್ಯಾರ್ಥಿಗಳಿಗೆ ಮೊಬೈಲ್ ಫೋನ್ ಮತ್ತು ಕಂಪ್ಯೂಟರ್‌ಗಳಲ್ಲಿ ಹಾಡು ಮತ್ತು ಕಥೆಗಳನ್ನು ಕೇಳಲು, ರೆಕಾರ್ಡ್ ಮಾಡಲು, ಮತ್ತೆ ಅದನ್ನು ಕೇಳಲು ಹಾಗೂ ಧ್ವನಿ ಸಂಕಲನ ಮಾಡಲು ಅಥವಾ ವಾಚಿಸಲು, ಪುನರಾವರ್ತಿಸಲು, ಅವನ್ನು ಡೌನ್‌ಲೋಡ್ ಅಥವಾ ಮುದ್ರಿತ ಪ್ರತಿ ಪಡೆದುಕೊಳ್ಳಲು ಅನುವು ಮಾಡಿಕೊಟ್ಟಿತು.

ಡಿಜಿಟಲ್ ಸಾಧನಗಳನ್ನು ಬಳಸಿ ಚಿತ್ರಗಳನ್ನು, ವಿಡಿಯೋಗಳನ್ನು ಪರದೆಯ ಮೇಲೆ ಪ್ರದರ್ಶಿಸಿ, ಚರ್ಚಿಸಲು, ಪದಗಳ ಪಟ್ಟಿಯನ್ನು ತಯಾರಿಸಲೂ ಮತ್ತು ಇದನ್ನು ಬಳಸಿ ಚಿಕ್ಕ, ಸರಳ ಪ್ರಬಂಧಗಳನ್ನು ಬರೆಯಲು ಬಳಸಲಾಗುತ್ತಿತ್ತು. ಈ ಡಿಜಿಟಲ್ ಸಂಪನ್ಮೂಲಗಳನ್ನು ಒಂದೇ ತರಗತಿಯಲ್ಲಿ ಹಲವು ಭಾಷೆಗಳನ್ನು ಮಾತನಾಡುವ ವಿದ್ಯಾರ್ಥಿಗಳ ಅಗತ್ಯಗಳಿಗೆ ತಕ್ಕಂತೆ ರೂಪಿಸಿಕೊಳ್ಳಲಾಗಿತ್ತು. ಉದಾಹರಣೆಗೆ, ತಂತ್ರಜ್ಞಾನವನ್ನು ಬಳಸಿ ಟ್ಯಾಂಕ್ ಗಾರ್ಡನ್ ಉರ್ದು ಶಾಲೆಯಲ್ಲಿ ಉರ್ದು, ಹಿಂದಿ, ಇಂಗ್ಲಿಷ್ ಮತ್ತು ಇತರ ಮಾತೃ ಭಾಷೆಗಳ ಮೂಲಕ ಕನ್ನಡವನ್ನು ಕಲಿಸಲಾಯಿತು. ಈ ಮೂಲಕವಾಗಿಯೂ ಬಹು ಭಾಷಾ ಕಲಿಕೆಯನ್ನು ಬೆಂಬಲಿಸಲಾಗುತ್ತಿತ್ತು.

ಇದರ ಪರಿಣಾಮವಾಗಿ, ಬಹುತೇಕ ಮಕ್ಕಳು ಕಲಿಕೆಯಲ್ಲಿ ಉತ್ಸಾಹ ತೋರಿ, 'ಮನೆಕೆಲಸ'ವನ್ನು ಪೂರ್ಣಗೊಳಿಸಿದರು ಮತ್ತು ಯಾವುದೇ ಹಿಂಜರಿಕೆ ಇಲ್ಲದೆ ತರಗತಿಯಲ್ಲಿ ಮುಕ್ತವಾಗಿ ಅಭಿವ್ಯಕ್ತಪಡಿಸಲು ಮುಂದಾದರು. ಕೆಲವರಂತೂ ಸರಳವಾದ ಪದಗಳನ್ನು ಬರೆಯಲು ಶಕ್ತರಾದರು. ಸಾಂಪ್ರದಾಯಿಕ ಭಾಷಾ ಕಲಿಕೆಯ ತರಗತಿಗಳಿಗೆ ಹೋಲಿಸಿದರೆ, ICT ಸಂಪನ್ಮೂಲ ಆಧಾರಿತ ತರಗತಿಗಳು ಹೆಚ್ಚು ವೈವಿಧ್ಯತೆ ಮತ್ತು ಬಹುಮುಖತೆಯನ್ನು ಸಾಧ್ಯವಾಗಿಸಲು ನೆರವಾಯಿತು. ಈ ಡಿಜಿಟಲ್

ಸಂಪನ್ಮೂಲಗಳ ಬಳಕೆಯು ಕಿರಿಯ ವಿದ್ಯಾರ್ಥಿಗಳನ್ನು ಆರಂಭದಲ್ಲಿ ಹೆಚ್ಚು ಭಾಗವಹಿಸುವಂತೆ ಮತ್ತು ತೊಡಗಿಕೊಳ್ಳುವಂತೆ ಮಾಡಿತು. ಉದಾಹರಣೆಗೆ, ಮನೆಯೊಳಗೆ ನುಗ್ಗಲು ಯತ್ನಿಸಿದ ಕಳ್ಳನನ್ನು ಹಿಡಿದ ಪೊಲೀಸ್ ಕಥೆಯನ್ನು ಕೇಳಿದ ಮೇಲೆ ವಿದ್ಯಾರ್ಥಿಗಳು, ಮೊದಲಿಗೆ ಕಥೆಯನ್ನು ತಾವೇ ಕಲ್ಪಿಸಿಕೊಂಡರು, ನಂತರ ಅದನ್ನು ಜೋರಾಗಿ ಹೇಳಲಾರಂಭಿಸಿದರು ಮತ್ತು ಕೊನೆಯಲ್ಲಿ ಅದರ ಬಗೆಗೆ ಬರೆದರು. ಅವರ ಕಲ್ಪನೆಯನ್ನು ಆಧರಿಸಿ ಬರೆಯುವಂತಹ ಅವಕಾಶವು ಅವರಿಗೆ ಹೆಚ್ಚು ಕ್ರಿಯಾತ್ಮಕವಾದ ಅಭಿವ್ಯಕ್ತಿಗೆ ಆಸ್ಪದ ನೀಡಿತು.

## ಭಾಗ – 2

### ಶಿಕ್ಷಕರ ಅಭಿಪ್ರಾಯಗಳು

1. **ಟ್ಯಾಂಕ್ ಗಾರ್ಡನ್ ಶಾಲೆಯ ಕನ್ನಡ ಶಿಕ್ಷಕಿ – ಶ್ರೀಮತಿ ಶ್ರೀಮಾಲ ಭಟ್**
   ಕನ್ನಡ, ಇಂಗ್ಲಿಷ್, ಉರ್ದು ಭಾಷಾ ಪರಿಕಲ್ಪನೆಗಳನ್ನು ಬೋಧಿಸುವಲ್ಲಿ, ಗ್ರಹಿಕೆ, ಕ್ರಿಯಾತ್ಮಕ ಅಭಿವ್ಯಕ್ತಿ, ಸರಿಯಾದ ತಿಳುವಳಿಕೆಗಳನ್ನು ಡಿಜಿಟಲ್ ಸಂಪನ್ಮೂಲಗಳ ಬಳಕೆಯು ಗಮನದಲ್ಲಿಟ್ಟುಕೊಂಡಿತಲ್ಲದೆ, ವಿದ್ಯಾರ್ಥಿಗಳ ಮುಕ್ತವಾದ ಹಂಚಿಕೆಗೆ ಗಮನ ಹರಿಸಿತು. ವಿದ್ಯಾರ್ಥಿಗಳು ಪ್ರಾಣಿ, ಪಕ್ಷಿಗಳ ಧ್ವನಿಗಳನ್ನು ಆಲಿಸಿ ಗುರುತಿಸುವಂತೆ ಅಭ್ಯಾಸ ಮಾಡಿಸಲಾಯಿತು. ತದನಂತರ ಅವರ ಬರವಣಿಗೆಯ ಸಾಮರ್ಥ್ಯವೃದ್ಧಿಗೆ ಚಿಕ್ಕ ಚಿಕ್ಕ ಕಥಾ ಚಿತ್ರಸರಣಿಯನ್ನು ತಯಾರಿಸಿ ಆಸಕ್ತಿದಾಯಕವಾಗಿ ಕಥೆಯನ್ನು ಬರವಣಿಗೆಯ ರೂಪದಲ್ಲಿ ನಿರೂಪಿಸುವಂತೆ ಮಾಡಲಾಯಿತು. ಈ ಮೂಲಕ ಅವರಲ್ಲಿ ಆಸಕ್ತಿ ಹುಟ್ಟಿಸಿ ಕಲಿಕೆಯಲ್ಲಿ ತೊಡಗುವಂತೆ ಮಾಡಲಾಯಿತು. ಹೀಗೆ ಏಕಕಾಲದಲ್ಲಿ ಬೇರೆ ಬೇರೆ ಭಾಷೆಗಳ ಕಲಿಕೆಗೆ ಅವಕಾಶ ಒದಗಿಸಿದ್ದರಿಂದ ಕಲಿಕೆಯು ಪರಿಣಾಮಕಾರಿಯಾಯಿತು.
2. **ಟ್ಯಾಂಕ್ ಗಾರ್ಡನ್ ಉರ್ದು ಪ್ರೌಢಶಾಲೆಯ ಮುಖ್ಯ ಶಿಕ್ಷಕರು – ಶ್ರೀಮತಿ ನಹೀದ್ ಫಾತೀಮ**
   ಮೊದಲಿಗೆ ನಮ್ಮ ಮಕ್ಕಳು ಕನ್ನಡ ಭಾಷಾ ಓದಿನಲ್ಲಿ ಬಹಳ ಹಿಂದುಳಿದಿದ್ದು, ತಡವರಿಸುತ್ತಿದ್ದರು. ಈಗ ಹೋಲಿಸಿದರೆ ಪರವಾಗಿಲ್ಲ, ಓದಿನಲ್ಲಿ ಸ್ವಲ್ಪ ಬೆಳವಣಿಗೆಯಾಗಿದೆ. ಡಿಜಿಟಲ್ ತಂತ್ರಜ್ಞಾನದ ಬಳಕೆಯಿಂದಲೇ ಈ ಬದಲಾವಣೆ ಉಂಟಾಗಿದೆ ಎನ್ನಬಹುದು.
3. **ಈಜಿಪುರ ಸರ್ಕಾರಿ ಪ್ರೌಢಶಾಲೆಯ ಕನ್ನಡ ಶಿಕ್ಷಕರು– ಶ್ರೀಮತಿ ಸರೋಜ**
   ಡಿಜಿಟಲ್ ಮಾದರಿಯ ಪಾಠಗಳು ಗಣಿತ ಮತ್ತು ವಿಜ್ಞಾನದ ವಿಷಯಗಳಿಗೆ ಮಾತ್ರ ಸೀಮಿತಗೊಂಡಿರುತ್ತವೆ ಎಂದು ಈ ಮೊದಲು ತಿಳಿದಿದ್ದೆ. ಆದರೆ ಇದನ್ನು ಭಾಷಾ ಕಲಿಕೆಯ ವಿವಿಧ ಆಯಾಮಗಳಲ್ಲಿ ಕಲಿಸಲು ಇರುವ ಸಾಧ್ಯತೆಗಳನ್ನು ಕಂಡುಕೊಂಡ ಮೇಲೆ ನನ್ನ ಉತ್ಸಾಹ ಮತ್ತಷ್ಟು ಗರಿಗೆದರಿತು. ಮಕ್ಕಳ ಕಲಿಕೆಯಲ್ಲಿ ಖಂಡಿತವಾಗಿ ಬದಲಾವಣೆಯಾಗಿದೆ.

ತಂತ್ರಜ್ಞಾನದ ಬಳಕೆಯ ಬಗ್ಗೆ ಶಿಕ್ಷಕರ ಅಭಿಪ್ರಾಯಗಳನ್ನು ಈ ಮುಂದಿನ ಲಿಂಕ್‌ನಲ್ಲಿ ನೋಡಿ.

https://www.youtube.com/channel UCqgyxozUJgAxjBoSJNKbqWA

## ಸವಾಲುಗಳು

ಬೋಧನೆ, ಕಲಿಕೆ, ಸಂವಾದಗಳು ಮತ್ತು ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಎಲ್ಲಾ ಸಾಧ್ಯತೆಗಳ ನಡುವೆಯೂ ನಮ್ಮ ಮುಂದೆ ಹಲವು ಸವಾಲುಗಳಿವೆ. ಸಾಮಾನ್ಯವಾಗಿ ವಿದ್ಯುತ್ ಪೂರೈಕೆಯ ಸಮಸ್ಯೆ, ಶಾಲೆಗಳಲ್ಲಿ ಕಂಪ್ಯೂಟರ್ ಮತ್ತು ಅಂತರ್ಜಾಲ ಸಂಪರ್ಕ ಲಭ್ಯವಿಲ್ಲದಿರುವುದು, ಹೆಚ್ಚುವರಿ ತರಗತಿ ಕೋಣೆ ಲಭ್ಯವಿಲ್ಲದಿರುವುದರಿಂದ ವೇಳಾಪಟ್ಟಿಯ ಹೊಂದಾಣಿಕೆಯ ಸಮಸ್ಯೆ, ಪಠ್ಯಕ್ರಮವನ್ನು ಕಲಿಕೆಯ ಗುರಿಯೊಂದಿಗೆ ತಂತ್ರಜ್ಞಾನದೊಂದಿಗೆ ಸಮ್ಮಿಳಿತಗೊಳಿಸಲು ಅರಿವಿನ ಕೊರತೆ ಮತ್ತು ತಂತ್ರಜ್ಞಾನದ ಬಗೆಗೆ ಸಾಕಷ್ಟು ಅರಿವಿಲ್ಲದಿರುವುದು, ತಕ್ಷಣದ ಫಲಿತಾಂಶವನ್ನು ನಿರೀಕ್ಷಿಸುವುದು ಮೊದಲಾದ ಸವಾಲುಗಳನ್ನು ಕಾಣಬಹುದಾಗಿದೆ. ಈ ಎಲ್ಲಾ ಸವಾಲುಗಳೂ ಕೂಡ ತಂತ್ರಜ್ಞಾನವನ್ನು ಬೋಧನಾ ವಿಧಾನದಲ್ಲಿ ಹದದಲ್ಲಿ ಸಮ್ಮಿಳಿತಗೊಳಿಸಿ ಅರ್ಥಪೂರ್ಣವಾದ ಮಾರ್ಗವನ್ನು ಅಳವಡಿಸಿಕೊಳ್ಳುವ ಸಾಧ್ಯತೆಗಳಿಗೆ ತಡೆಯೊಡ್ಡಲಾರವು.

## ಉಪಸಂಹಾರ

- ತಂತ್ರಜ್ಞಾನವನ್ನು ಬಳಸಿ ರೂಪಿಸಲಾದ ಬೋಧನಾ ವಿಧಾನವು ಕಲಿಕೆಯ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡಿತು ಎನ್ನುವುದನ್ನು ಈ ಅಧ್ಯಯನವು ತೋರಿಸಿಕೊಡುತ್ತದೆ. ಡಿಜಿಟಲ್ ಸಂಪನ್ಮೂಲಗಳ ಕಲಿಕೆಯ ವಾತಾವರಣವನ್ನು ನಿರ್ಮಿಸಿದ್ದರಿಂದ ಪ್ರತಿ ವಿದ್ಯಾರ್ಥಿಯೂ ಸುಲಭವಾಗಿ ಅದರಲ್ಲಿ ಭಾಗವಹಿಸುವಂತೆ ಮಾಡಿತು.
- ಗುಂಪು ಚಟುವಟಿಕೆ, ಪರಸ್ಪರ ಅಂತರ್‌ಕ್ರಿಯೆ, ಸಂವಾದ ಹಾಗೂ ಚರ್ಚೆಗಳು ಮತ್ತು ವಿಶ್ಲೇಷಣೆಗಳು ವಿದ್ಯಾರ್ಥಿಗಳಲ್ಲಿ ಸಹಯೋಗದಲ್ಲಿ ಕಲಿಯುವುದನ್ನು ಸಾಧ್ಯವಾಗಿಸಿತು.
- ಈ ವಿಧಾನವು ಮಕ್ಕಳಲ್ಲಿರುವ ನಾಚಿಕೆ ಮತ್ತು ಆರಂಭಿಕ ಹಿಂಜರಿಕೆಗಳಿಂದ ಹೊರಬಂದು ತಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಲು ಸಹಾಯಮಾಡಿತು. ಶಿಕ್ಷಕರು ಮತ್ತು ಮಕ್ಕಳ ನಡುವೆ ಇದ್ದ ಅಂತರವನ್ನು ನಿವಾರಿಸಿ, ಅವರಿಬ್ಬರೂ ಕಲಿಕಾ ಪ್ರಕ್ರಿಯೆಯಲ್ಲಿ ಒಟ್ಟುಗೂಡಿ ತೊಡಗುವುದನ್ನು ಹೆಚ್ಚಿಸಿತು.
- ಶಾಲಾ ಶಿಕ್ಷಕರು ವಿದ್ಯಾರ್ಥಿಗಳ ಹಾಜರಾತಿಯಲ್ಲಿನ ಹೆಚ್ಚಳ ಮತ್ತು ಕಲಿಕೆಯಲ್ಲಿನ ಅವರ ಆಸಕ್ತಿಯು ಹೆಚ್ಚಿದುದನ್ನು ಗುರುತಿಸಿದರು.
- ಇತರ ಮಾರ್ಗ ಹೋಲಿಸಿದರೆ, ತಂತ್ರಜ್ಞಾನ ಆಧಾರಿತ ಬೋಧನಾವಿಧಾನವು ಹೆಚ್ಚಿನ ಮಟ್ಟದಲ್ಲಿ ಬೋಧನಾ ಮತ್ತು ಕಲಿಕಾ ಸ್ನೇಹಿ ಎಂದು ಹೇಳುವುದು ಅಪ್ರಸ್ತುತವಾಗುವುದಿಲ್ಲ.

- ಹೀಗಿದ್ದರೂ, ತಂತ್ರಜ್ಞಾನ ಸಂಯೋಜಿತ ಬೋಧನಾವಿಧಾನವನ್ನು ಅಳವಡಿಸಿಕೊಳ್ಳಲು ಹೆಚ್ಚಿನ ಸವಾಲುಗಳಿವೆ ಎನ್ನುವುದನ್ನು ಮರೆಯುವಂತಿಲ್ಲ.

**ಪರಾಮರ್ಶನೆ**


- Agnihotri, Rama (1995). Multilingualism as a class room resource. In Kathleen Heugh, Amanda Sieruhn and Peter Pluddemann (eds.). Multilingual Education for South Africa. Johannesburg : Heinemann, 3-7. https://www.academia.edu /16556609 Multilingualism_as_a_classroom_resource?auto=download
- Annual Report 2014-15. https://itforchange.net/ Annual%20Report%202014-15/
- Position paper - National focus group on teaching of Indian languages . (2005) National curriculum framework. NCERT: New Delhi.
- ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005). Translated by S.S. Yadurajan. Delhi: NCERT. http://epathshala.nic.in/wp-content/doc/ NCF/Pdf/kannada.pdf (National Curriculum Framework (2005) NCERT: New Delhi. http://www.ncert.nic.in/rightside/links/ pdf/framework/english/nf2005.pdf



**ಡಿ. ಆನಂದ**: ಅರ್ಥಶಾಸ್ತ್ರ, ಕನ್ನಡ ಭಾಷೆ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಬಿ.ಎಡ್. ಪದವೀಧರರು. ಜೆ.ಎಸ್.ಎಸ್. ಸಂಯುಕ್ತ ಪದವಿ ಪೂರ್ವ ಕಾಲೇಜು, ಜಯನಗರ, ಬೆಂಗಳೂರು ಇಲ್ಲಿ ಎಂಟು ವರ್ಷಗಳ ಕಾಲ ಕನ್ನಡ ಭಾಷಾ ಶಿಕ್ಷಕರಾಗಿ ಸೇವೆ ಸಲ್ಲಿಸಿ ಈಗ ಬೆಂಗಳೂರಿನ ಐಟಿ ಫಾರ್ ಚೇಂಜ್ ಎಂಬ ಸರ್ಕಾರೇತರ ಸಂಸ್ಥೆಯಲ್ಲಿ ಕಳೆದ ಆರು ವರ್ಷಗಳಿಂದ ಕಾರ್ಯಕ್ರಮ ಸಹಾಯಕರಾಗಿದ್ದಾರೆ. ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ತಂತ್ರಜ್ಞಾನ ಸಂಯೋಜನೆಯ ವಿಷಯವಾಗಿ ಇವರು ಕಾರ್ಯಪ್ರವೃತ್ತರಾಗಿರುತ್ತಾರೆ.

*ಸಂಪರ್ಕ:* anand@itforchange.net


ಶಾಲೆಗಳ ಮತ್ತು ಶಿಕ್ಷಕ/ಕಿಯರ ಹೆಸರುಗಳನ್ನು ಅವರ ಅನುಮತಿ ಪಡೆದು ನಂತರವೇ ಬಳಸಲಾಗುತ್ತಿದೆ.